ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 05.03.2025.

**ಮುಂದುವರೆದ ಮುಖ್ಯ ವಿಚಾರಣೆಃ** ಪ್ರತಿವಾದಿ ಪರ ಶ್ರೀ ಆರ್.ಜೆ.ಪಿ. ವಕೀಲರಿಂದಃ

ಇಂದು ನಾನು ದಾವೆಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಮೂರು ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು, ನಿಡಿ-15 ರಿಂದ ನಿಡಿ-17 ಎಂದು, ಸಿಡಿಯನ್ನು ನಿಡಿ-18 ಎಂದು, 65-ಬಿ ಸರ್ಟಿಫಿಕೇಟ್‌ನ್ನು ನಿಡಿ-19 ಎಂದು, ಐರ್ಶಯ್ಯ ಫೈನಾನ್ಸ್ ರವರು ನೀಡಿದ ಬಿಲ್ ಡಿಸ್‌ಕೌಂಟ್‌ನ್ನು ನಿಡಿ-20 ಎಂದು, ಪ್ರನೋಟ್‌ನ್ನು ನಿಡಿ-21 ಎಂದು, ಎರಡು ರಶೀದಿಗಳನ್ನು ಕ್ರಮವಾಗಿ ನಿಡಿ-22 ಮತ್ತು ನಿಡಿ-23 ಎಂದು ಗುರುತಿಸಲಾಯಿತು. ನಿಡಿ-20ರಲ್ಲಿ ಸಾಕ್ಷಿ ವಾದಿಯ ಮಗನಾದ ಅನೀಲ್‌ಕುಮಾರ ರವರ ಎರಡು ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-20(ಎ) ಮತ್ತು ನಿಡಿ-20(ಬಿ) ಒಂದು, ಅದೇ ರೀತಿ ಸಾಕ್ಷಿ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-20(ಸಿ) ಎಂದು, ನಿಡಿ-21ರಲ್ಲಿ ಸಾಕ್ಷಿ ತಮ್ಮ ಹಾಗೂ ಅನೀಲ್‌ಕುಮಾರ ರವರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-21(ಎ) ಮತ್ತು ನಿಡಿ-21(ಬಿ) ಎಂದು, ಅದೇ ರೀತಿ ನಿಡಿ-22 ಮತ್ತು ನಿಡಿ-23ರಲ್ಲಿ ಸಾಕ್ಷಿ ತಮ್ಮ ಮತ್ತು ಅನೀಲ್‌ಕುಮಾರ ರವರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-22(ಎ) ಮತ್ತು ನಿಡಿ-22(ಬಿ) ಎಂದು, ನಿಡಿ-23(ಎ) ಮತ್ತು ನಿಡಿ-23(ಬಿ) ಎಂದು ಗುರುತಿಸಲಾಯಿತು.

ಆದ್ದರಿಂದ ವಾದಿಯ ದಾವೆಯನ್ನು ಖರ್ಚು ಸಮೇತ ವಜಾ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ** ವಾದಿ ಪರ ಶ್ರೀ ಪಿ.ವಿ.ಎ. ವಕೀಲರಿಂದಃ

Aishawarya ಫೈನಾನ್ಸ್ ನಿಂದ ಅನೀಲ್‌ಕುಮಾರ ರವರು ಯಾವ ದಿನದಂದು ಸಾಲ ಪಡೆದಿರುತ್ತಾರೆ ಎಂದು ನನಗೆ ದಿನಾಂಕ ನಿಖರವಾಗಿ ಗೊತ್ತಿಲ್ಲ, ಆದರೆ 2003ರಲ್ಲಿ ಪಡೆದಿರುತ್ತಾರೆ. ಸದರಿ Aishawarya ಫೈನಾನ್ಸ್ ರೂ.2 ಲಕ್ಷ ಪಡೆದಿರುತ್ತಾರೆ. ಸದರಿ ಸಾಲ 2004ರಲ್ಲಿ ಪಾವತಿಸಿರುತ್ತೇವೆ. ಸದರಿ ಸಾಲವನ್ನು ಸಂಪೂರ್ಣವಾಗಿ ನಾನೇ ತುಂಬಿರುತ್ತೇನೆ. ನಾನು ಸದರಿ ಸಾಲಕ್ಕೆ ಬಡ್ಡಿ ಅಂತ ಒಟ್ಟಾಗಿ ರೂ.2,48,000/- ಹಣವನ್ನು ಪಾವತಿಸಿರುತ್ತೇನೆ. ಸದರಿ ಫೈನಾನ್ಸ್ ಚನ್ನಬಸವರಾಜ ಪಾಟೀಲ್ ರವರದು ಆಗಿರುತ್ತದೆ. ನಾನು ಸದರಿ ಸಾಲದ ಹಣವನ್ನು ಫೈನಾನ್ಸ್ ನಲ್ಲಿ ಚನ್ನಬಸವರಾಜ ರವರ ಕೈಯಲ್ಲಿ ಕೊಟ್ಟಿರುತ್ತೇನೆ. ಸದರಿ ಚನ್ನಬಸವರಾಜ ರವರು ನಮ್ಮ ಓಣಿಯಲ್ಲಿ ಇರುತ್ತಾರೆ ಎಂದರೆ ಸರಿ. ಸದರಿ ಚನ್ನಬಸವರಾಜ ರವರು ನಾನು ಸಾಲ ತುಂಬಿದ ಬಗ್ಗೆ ರಶೀದಿಯನ್ನು ನನ್ನ ಕೈಯಲ್ಲಿ ಕೊಟ್ಟಿಲ್ಲ.

ಮೇಲೆ ಹೇಳಿದ ಫೈನಾನ್ಸ್ ಗೆ ನಾನು ಯಾವುತ್ತೂ ಸಾಲ ಮರುಪಾವತಿ ಮಾಡಿಲ್ಲ, ವಾದಿಯ ಮಗನಾದ ಅನೀಲ್‌ಕುಮಾರ ರವರೇ ಸದರಿ ಸಾಲವನ್ನು ಸಂಪೂರ್ವಾಗಿ ಭರಿಸಿರುತ್ತಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಸಂಗತಿಯನ್ನು ಪ್ರತಿವಾದ ಪತ್ರದಲ್ಲಿ ಹೇಳಿರುತ್ತೇನೆ. ನಿಡಿ-20 ಸಾಲಕ್ಕೆ ನಾನು ಜಾಮೀನುದಾರ ಮಾತ್ರ ಆಗಿದ್ದು, ಆದರೆ ಸಾಲವನ್ನು ಸಂಪೂರ್ಣವಾಗಿ ನಾನು ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಫೈನಾನ್ಸ್ ರವರಿಗೆ ಅಕೌಂಟ್ಸ್ ಲೆಗ್ಜರಿಗಳನ್ನು ಕೇಳಿರುವುದಿಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**